మూల దావా ಸಂಖ್ಯೆ 119/2016

ಪಿ ಡಬ್ಲ್ಯೂ-2

**(ದಿನಾಂಕ 27.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ B.R.G. ವಕೀಲರಿಂದಃ-**

ನನಗೆ ಓದಲು ಬರೆಯಲು ಬರುವುದಿಲ್ಲಾ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ಗೊತ್ತಿಲ್ಲಾ. ದಾವಾ ಆಸ್ತಿ ಎಲ್ಲಿ ಇದೆ ಎಂದು ಗೊತ್ತಿಲ್ಲಾ. ದಾವಾ ಆಸ್ತಿ ಹತ್ತಿರ ನನ್ನ ಆಸ್ತಿ ಯಾವುದು ಇರುವುದಿಲ್ಲಾ. ಈ ಪ್ರಕರಣದಲ್ಲಿ ವಾದಿಯರು ಪ್ರತಿವಾದಿ ಯಾರು ಎಂದರೆ ದಾದಾಸಾಬ್ ಎನ್ನುತ್ತಾರೆ. ದಾವೆಯು ಯಾರು ಯಾರ ವಿರುದ್ಧ ಹಾಕಿರುತ್ತಾರೆ ಎಂದರೆ ನೂರ್ ಸಾಬ್ ರವರ ವಿರುದ್ಧ ಹೂಡಿರುತ್ತಾರೆ. ದಾವಾ ಆಸ್ತಿ ಸರ್ವೆ ನಂಬರ 174 ಇರುತ್ತದೆ. ಒಂದುವರೆ ಎಕರೆ ಇರಬಹುದು. ದಾವಾ ಆಸ್ತಿಯಲ್ಲಿ ಯಾರು ಯಾರು ಎಷ್ಟು ಆಸ್ತಿ ಖರೀದಿಸಿರುತ್ತಾರೆ ಎಂದರೆ 4 ಜನ ಇರುತ್ತಾರೆ. 4 ಜನರ ನಿರ್ದಿಷ್ಟ ವಿಸ್ತೀರ್ಣ ಗೊತ್ತಿಲ್ಲಾ. ಯಾವ ಯಾವ ದಿಕ್ಕಿನಲ್ಲಿ ಯಾರು ಯಾರು ಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ದಿಕ್ಕು ಗೊತ್ತಾಗುವುದಿಲ್ಲಾ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ದಿಕ್ಕುಗಳನ್ನು ತೋರಿಸಿಲ್ಲಾ ಎಂದರೆ ಹೇಳುತ್ತೇನೆ. ಪೂರ್ವಕ್ಕೆ ಡಾಬಾ ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಖಾಲಿ ಜಾಗ ದಕ್ಷಿಣಕ್ಕೆ ಕಾಂಪೌಂಡ ಇದೆ. ಸದರಿ ವಿಷಯವನ್ನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ವೈಯಕ್ತಿಕ ಮಾಹಿತಿ ಕೊಟ್ಟಿರುವುದಿಲ್ಲಾ ಎಂದರೆ ಸಾಕ್ಷಿ ಉತ್ತರ ಕೊಡುವುದಿಲ್ಲಾ. ದಾವಾ ಆಸ್ತಿಯಲ್ಲಿ ಯಾರು ಯಾರು ಏನೇನು ಗಲಾಟೆ ಮಾಡಿದ್ದಾರೆ ಎಂದರೆ ಸಾಕ್ಷಿ ಉತ್ತರ ಕೊಡುವುದಿಲ್ಲಾ. ನನಗೆ 72 ವರ್ಷ ವಯಸ್ಸು. ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 72 ಅಂತಾ ಹೇಳಿ ಬರೆಸಿರುತ್ತೇನೆ. ನಾನು ಸಾಕ್ಷಿ ಪ್ರಮಾಣ ಪತ್ರಕ್ಕೆ ಖುದ್ದು ಮಾಹಿತಿ ಕೊಟ್ಟಿಲ್ಲಾ ಎಂದರೆ ಸರಿಯಲ್ಲ. ನೂರ್ ಸಾಬ್ ರವವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಬಿ ಹುಸೇನ್ ಸಾಬ್ ತಂದೆ ಇಮಾಮ್ ಸಾಬ್ ನನಗೆ ಗೊತ್ತಿಲ್ಲಾ. ಮಹಬೂಬ್ ಸಾಬ್ ತಂದೆ ಸಣ್ಣ ರಾಜೇಸಾಬ್ ಗೊತ್ತು. ಕೆ ಕಲಾಂ ತಂದೆ ದೂಡ್ಡ ರಾಜೇ ಸಾಬ್ ಗೊತ್ತು ದಾದಾಪೀರ್ ತಂದೆ ಅಜೀಜ್ ಸಾಬ್ ಗೊತ್ತು. ಮೇಲ್ಕಂಡವರು ಮತ್ತು ನಾನು ನೂರ್ ಸಾಬ್ ವಿಶ್ವಾಸಿಕರು ಎಂದರೆ ಸರಿ. ನಾವೆಲ್ಲರೂ ನೂರ್ ಸಾಬ್ ರವರ ವಿಶ್ವಾಸಿಕರು ಆಗಿರುವ ಕಾರಣ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಸಹ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೂರ್ ಸಾಬ್ ಮತ್ತು ಅವರ ಅಣ್ಣ ತಮ್ಮಂದಿರು ಪಾಲು ವಿಭಾಗ ಮಾಡಿಕೊಂಡ ದಾಖಲೆಗೆ ಸಾಕ್ಷಿ ಸಹಿ ಮಾಡಿರುವುದಿಲ್ಲಾ. ದಾವಾ ಆಸ್ತಿ ಸರ್ವೆ ನಂಬರ ಡೋರ್ ನಂಬರ ಚೆಕ್ ಬಂದಿ ಮಾಹಿತಿ ನನಗೆ ಇಲ್ಲಾ ಎಂದರೆ ಡೋರ್ ನಂಬರ ಬರುವುದಿಲ್ಲಾ. ಪಹಣಿ ಬರುತ್ತದೆ. ದಾವಾ ಆಸ್ತಿ ವಿಸ್ತೀರ್ಣದ ಬಗ್ಗೆ ನನಗೆ ಗೊತ್ತಿಲ್ಲಾ. ದಾದೇ ಸಾಬ್ ರವರ ಪರಿಚಯ. ಅವರಿಗೆ ಎಷ್ಟು ಆಸ್ತಿ ಇದೆ ಎಂದರೆ ಗೊತ್ತಿಲ್ಲಾ. ಪಂಚಾಯತಿದಾರರು ಯಾರು ಯಾರು ಇದ್ದರು ಅಂತಾ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಯನ್ನು ಎಷ್ಟು ಭಾಗ ಮಾಡಿಕೊಂಡರು ಎಂದರೆ ಮೂರು ಜನ ಭಾಗ ಮಾಡಿಕೊಂಡಿರುತ್ತಾರೆ. ಯಾರು ಯಾರು ಎಷ್ಟು ವಿಸ್ತೀರ್ಣ ತೆಗೆದುಕೊಂಡರು ಎಂದರೆ ಮುನಾಫಾ, ದಾದಾಪೀರ್ ವಿಭಾಗ ಮಾಡಿಕೊಂಡಿರುತ್ತಾರೆ. ಒಬ್ಬಬ್ಬರು 20 ಸೆಂಟ್ಸ 30 ಸೆಂಟ್ಸ ವಿಭಾಗ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿ ದಾದೇ ಸಾಬ್ ರವರ ಸ್ವಂತ ವೈಯಕ್ತಿಕ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಖಾತೆಯನ್ನು ದಾದೇ ಸಾಬ್ ರವರು ಅವರ ಹೆಸರಿಗೆ ಮಾಡಿಕೊಂಡು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾದೇ ಸಾಬ್ ರವರ ಸ್ವಾಧೀನಕ್ಕೆ ಬಂದ ಆಸ್ತಿಯನ್ನು ಅವರೇ ಸ್ವಾಧೀನ ತೆಗೆದುಕೊಂಡರು. ನೂರ್ ಸಾಬ್ ರವರಿಗೆ ಬಂದ ಆಸ್ತಿಯನ್ನು ಅವರವರೇ ಸ್ವಾಧೀನ ತೆಗೆದುಕೊಂಡರು ಎಂದರೆ ಸರಿ. ಮೂರು ಜನ ಅವರವರೇ

ಮೂಲ ದಾವಾ ಸಂಖ್ಯೆ 119/2016

ಪಿ ಡಬ್ಲ್ಯೂ-2

ಸ್ವಾಧೀನ ತೆಗೆದುಕೊಂಡರು ಎಂದರೆ ಸರಿ. ಅವರವರ ಭಾಗಕ್ಕೆ ಅವರವರೇ ಹಕ್ಕುದಾರರು ಎಂದರೆ ಸರಿ. ಪ್ರತಿವಾದಿಯರು ಯಾವ ದಾಖಲೆ ಸೃಷ್ಟಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿ ಹೋಟಲ್ ಜಾಗ ದಾದೇ ಸಾಬ್ ತನ್ನ ಭಾಗಕ್ಕೆ ಪಡೆದ ನಂತರ ದಾದಾ ಸಾಬ್ ಮಗಳು ಹೊಟಲ್ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನಂತರ ಖರೀದಿ ತೆಗೆದುಕೊಂಡ ವ್ಯಕ್ತಿಯ ಸ್ವಾಧೀನಕ್ಕೆ ತಗೆದುಕೊಂಡರು ಎಂದರೆ ಸರಿಯಲ್ಲ. ಸದರಿ ಆಸ್ತಿ ಈಗ ಖರೀದಿ ತೆಗೆದುಕೊಂಡ ವ್ಯಕ್ತಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಂದೂ ಕೂಡ ನೂರ್ ಸಾಬ್ ನ ಹಕ್ಕು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನೂರ್ ಸಾಬ್ ರವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 119/2016

ಪಿ ಡಬ್ಲ್ಯೂ-3

**(ದಿನಾಂಕ 27.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ B.R.G. ವಕೀಲರಿಂದಃ-**

ನಾನು 6 ನೇ ತರಗತಿ ಓದಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ಓದಿ ತಿಳಿದುಕೊಂಡಿರುತ್ತೇನೆ. ದೊಡ್ಡ ದಾದೇಸಾಬ್, ಸಣ್ಣ ದಾದೇ ಸಾಬ್ ಅಜೀಜ್ ಸಾಬ್ ರವರ ವ್ಯವಹಾರದಲ್ಲಿ ನಾನು ಭಾಗವಹಿಸಿರುತ್ತೇನೆ. ಪಾಲು ವಿಭಾಗ ವ್ಯವಹಾರದಲ್ಲಿ ನಾನು ಭಾಗವಹಿಸಿರುತ್ತೇನೆ. 2014 ರಲ್ಲಿ ಪಾಲು ವಿಭಾಗ ಆಗಿರುತ್ತದೆ. ದಿನಾಂಕ ತಿಂಗಳು ನೆನಪಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ 2014 ರಲ್ಲಿ ಪಾಲು ವಿಭಾಗ ಆಗಿದೆ ಅಂತಾ ಬರೆಸಿರುತ್ತೇನೆ. ಆ ಕಾಲಕ್ಕೆ ರಾಜು, ಕಲಾಂ, ದಾದಾಪೀರ್ ಹಾಜರಿದ್ದರು. ಸಾಕ್ಷಿದಾರರು ಸುಬಾನ್ ಸಾಬ್ ನಾನು ಹಾಜರಿದ್ದೆವು. ಪಾಲು ವಿಭಾಗ ಪತ್ರವನ್ನು ಯಾರು ಬರೆದರು ಎಂದರೆ ಗೊತ್ತಿಲ್ಲ. ಅಜೀಜ್ ಸಾಬ್ ಗೆ 26 ಸೆಂಟ್ಸ್ ದೊಡ್ಡ ರಾಜೇ ಸಾಬ್ ಗೆ 26 ಸೆಂಟ್ಸ್ ಸಣ್ಣ ದಾದೇ ಸಾಬ್ ಗೆ 26 ಸೆಂಟ್ಸ್ ಮತ್ತು ಸಣ್ಣ ರಾಜೇ ಸಾಬ್ ರವರ ಮಕ್ಕಳಿಗೆ 26 ಸೆಂಟ್ಸ್ ದಾವಾ ಆಸ್ತಿ ಬಂದಿರುತ್ತದೆ. ಇಮಾಮ್ ಸಾಬ್ ರವರ ಮಕ್ಕಳಿಗೆ 26 ಸೆಂಟ್ಸ್ ದಾವಾ ಆಸ್ತಿ ಬಂದಿರುತ್ತದೆ. ದಾದೇ ಸಾಬ್ ರವರಿಗೆ 8 ಸೆಂಟ್ಸ್ ಬಂದಿರುತ್ತದೆ. ಇಮಾಮ್ ಸಾಬ್ ರವರಿಗೆ 8 ಸೆಂಟ್ಸ್ ನೂರ್ ಸಾಬ್ ರವರಿಗೆ 10 ಸೆಂಟ್ಸ್ ಬಂದಿರುತ್ತದೆ. ಸದರಿ ಭಾಗ ಗಳ ಚೆಕ್ ಬಂದಿ ಹೇಳಬಲ್ಲೆ. ಈಗ ಹೇಳಿದಂತೆ ವಿಷಯವನ್ನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ವೈಯಕ್ತಿಕ ಮಾಹಿತಿ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಕುಟುಂಬದ ಎಷ್ಟು ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಅದೇ ಸರ್ವೆ ನಂಬರ 174 ಮಾತ್ರ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ದಾದೇ ಸಾಬ್ ಕುಟುಂಬಕ್ಕೆ ಸರ್ವೆ

ನಂಬರ 174 ಹೊರತು ಪಡಿಸಿ ಬೇರೆ ಆಸ್ತಿಗಳು ಇದೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ಉಳಿದ ಆಸ್ತಿಗಳನ್ನು ತೋರಿಸಿಲ್ಲಾ ಎಂದರೆ ಸರಿ. ನಾನು ಸಾಕ್ಷಿದಾರರು ಬಿಕ್ಲಂ ದಾರರು ಎಲ್ಲಾರು ಸೇರಿ ದಾದೇ ಸಾಬ್ ರವರಿಗೆ ಸಂಬಂಧಿಸಿದ ಆಸ್ತಿಗಳನ್ನು ಕಬಳಿಸಬೇಕೆಂದು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾದೇ ಸಾಬ್ ರವರಿಗೆ ಹೊರತು ಪಡಿಸಿ ಅವರ ಅಣ್ಣ ತಮ್ಮಂದಿರಿಗೆ ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ಪಾಲು ವಿಭಾಗ ಆದ ನಂತರ ಅವರವರ ಪಾಲಿನ ಆಸ್ತಿಯನ್ನು ಅವರವರೇ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ಅವರವರ ಪಾಲಿನ ಆಸ್ತಿಯನ್ನು ಅವರವರೇ ಸ್ವಾಧೀನ ಹೊಂದಿರುತ್ತಾರೆ ಅವರಿಗೆ ಹಕ್ಕು ಇದೆ ಎಂದರೆ ಸರಿ. ದಾವಾ ಆಸ್ತಿ ಯಲ್ಲಿ ಹೋಟಲ್ ಬಿಲ್ಡಿಂಗ ನಲ್ಲಿ ದಾದೇ ಸಾಬ್ ಮಗಳು ಹೊಟಲ್ ನಡೆಸುತ್ತಿದ್ದಳು ಎಂದರೆ ಸರಿಯಲ್ಲ. ಹೊಟಲ್ ನಡೆಸುತ್ತಿದ್ದ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾದೇ ಸಾಬ್ ಅವರ ಹಕ್ಕು ಆಸ್ತಿಯ ಸ್ವಾಧೀನವನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಯಲ್ಲಿ ಯಾವಾಗ ಯಲ್ಲಿ ಗಲಾಟೆ ಆಯಿತು ಎಂದು ನಾನು ನೋಡಿರುವುದಿಲ್ಲಾ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಹೇಳಿ ಬರೆಸಿರುವುದಿಲ್ಲಾ. ನಾನು ಮತ್ತು ನೂರ್ ಸಾಬ್ ವಿಶ್ವಾಸಿಕರು ಎಂದರೆ ಇಲ್ಲರೂ ವಿಶ್ವಾಸಿಕರು. ಹೀಗಾಗಿ ನಾನು ನೂರ್ ಸಾಬ್ ರವರ ಪರವಾಗಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂಬರ 174, 1 ಎಕರೆ 14 ಸೆಂಟ್ಸ್ ಇರುತ್ತದೆ. ಚಕ್ ಬಂದಿ ಪೂರ್ವಕ್ಕೆ ಕಾಲೇಜ್ ಗೋಡೆ, ಪಶ್ಚಿಮಕ್ಕೆ ಹೊಸಪೇಟೆ ರಸ್ತೆ, ಉತ್ತರಕ್ಕೆ ಬಿ ಡಿ ಓ ಕೆಚೇರಿ, ದಕ್ಷಿಣಕ್ಕೆ ದಾರಿ ಇದೆ. ಈಗ ಹೇಳಿದ ಚೆಕ್ ಬಂದಿಯನ್ನು ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದ ಅಂಶಗಳು ಮತ್ತು ಬುಡೇನ್ ಸಾಬ್ ರವರ ಸಾಕ್ಷಿ

ಮೂಲ ದಾವಾ ಸಂಖ್ಯೆ 119/2016

ಪಿ ಡಬ್ಲ್ಯೂ-3

ಪ್ರಮಾಣ ಪತ್ರದ ಅಂಶಗಳನ್ನು ಎಲ್ಲಾ ಒಂದೇ ರೀತಿ ತಯಾರಿಸಿ ಹೆಸರು ಮಾತ್ರ ಬದಲಾಯಿಸಿ ವಕೀಲರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನೂರ್ ಸಾಬ್ ಅವರ ಅಣ್ಣ ತಮ್ಮಂದಿರು ಯಾವುದೇ ರೀತಿ ಹಕ್ಕು ಸ್ವಾಧೀನ ಹೊಂದಿಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಆಸ್ತಿ ಇರುವುದಿಲ್ಲಾ. ಬುಡೇನ್ ಸಾಬ್ ಮತ್ತು ನಾನು ಸಾಕ್ಷಿ ನುಡಿಯಲು ಬಂದಿರುತ್ತೇವೆ. ನೂರ್ ಸಾಬ್ ಕೇಸ್ ಇರುವ ಬಗ್ಗೆ ತಿಳಿಸಿರುತ್ತಾರೆ. ನೂರು ಸಾಬ್ ಹೇಳಿ ಬರೆಸಿದ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.